ಹಿರೇಕೆರೂರು ಪಟ್ಟಣ ಪಂಚಾಯಿತಿಗೆ ಮುಖ್ಯಾಧಿಕಾರಿ

1859 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣ ಪಂಚಾಯತಿ ರಚನೆ ಆದಾಗಿನಿಂದ ಮುಖ್ಯಾಧಿಕಾರಿ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಯಾವಾಗ ಈ ಹುದ್ದೆಯನ್ನು ತುಂಬಲಾಗುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :

ಅ) ಬಂದಿದೆ.

ಆ) ಸರ್ಕಾರದ ಅಧಿಕೃತ ಜ್ಞಾಪನಾ ಸಂ : ನಅಇ : 257 ಟಿಎಂಇ 97 ದಿನಾಂಕ : 28-7-97ರಲ್ಲಿ ಮುಖ್ಯಾಧಿಕಾರಿ ಹುದ್ದೆಯನ್ನು ತುಂಬಲಾಗಿದೆ.

ನಗರಸಭೆಗೆ ನೀಡಲಾದ ಅಭಿವೃದ್ಧಿ ಅನುದಾನ

1863 - ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿರುವ ನಗರಸಭೆಗಳಿಗೆ ಅಭಿವೃದ್ಧಿ ಕೆಲಸಕ್ಕೋಸ್ಕರ ಬಿಡುಗಡೆ ಮಾಡಿದ ಹಣವೆಷ್ಟು? (ಜಿಲ್ಲಾವಾರು ವಿವರ ಕೊಡಿ)

ಆ) 1997-98ನೇ ಸಾಲಿನಲ್ಲಿ ಗೋಕಾಕ್ ನಗರಸಭೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಇ) ಸದರಿ ನಗರಸಭೆಯು ಬೇಡಿಕೆ ಇಟ್ಟ ಬಗ್ಗೆ ಅದರ ಮೊತ್ತವೆಷ್ಟು?

ಈ) 10ನೇ ಹಣಕಾಸು ಆಯೋಗದಲ್ಲಿ ಗೋಕಾಕ್ ನಗರಸಭೆ ಮತ್ತು ಕೊಣ್ಣೂರು ಪುರಸಭೆಗಳಿಗೆ ನೀಡಿದ ಹಣವೆಷ್ಟು? ಅದರಲ್ಲಿ ಖರ್ಚಾದ ಹಣದ ವಿವರವೇನು?

ಶ್ರೀ ವಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) 96-97ರಲ್ಲಿ ಈ ಕೆಳಗಿನಂತೆ 3 ನಗರಸಭೆಗಳಿಗೆ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಿದೆ.

1)	ಹಾಸನ	75.00
2)	ಬೀದರ್	20.00
3)	ಚಿತ್ರದುರ್ಗ	3.00